**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ**

**ಕೆ.ಆರ್.ನಗರ**

**ಮಿಸ್ 16/2023**

ಪಿ ಡಬ್ಲ್ಯೂ-1

**ದಿನಾಂಕ 24.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ ಶ್ರೀ ಆರ್.ಕೆ. ಅರ್ಜಿದಾರರ ಪರ ವಕೀಲರುಃ**

ನನ್ನ ದಾವೆಗೆ ಸಂಬಂಧಪಟ್ಟಂತೆ ಕೆಳಕಂಡ ದಾಖಲಾತಿಗಳನ್ನು ಹಾಜರುಪಡಿಸಿರುತ್ತೇನೆ.

| ದಾಖಲಾತಿಗಳು | ನಿಶಾನೆ |
|---|---|
| ದಾವಾ ಸಂಖ್ಯೆ 183/2010 ರ ದೃಡೀಕೃತ ತೀರ್ಪನ್ನು ಹಾಜರು ಪಡಿಸಿದ್ದು ಅದನ್ನು | ನಿಪಿ-1 |
| ದಾವಾ ಸಂಖ್ಯೆ 183/2010 ರ ದೃಡೀಕೃತ ಡಿಕ್ರಿಯನ್ನು ಹಾಜರು ಪಡಿಸಿದ್ದು ಅದನ್ನು | ನಿಪಿ-2 |

ಮೇಲ್ಕಂಡ ದಾಖಲಾತಿಗಳನ್ನು ಸಾಕ್ಷಿ ಗುರುತಿಸಿದ ಮೇರೆಗೆ ಅವುಗಳನ್ನು ನಿಶಾನಿಕರೆಸಲಾಗಿದೆ.

**ಪಾಟೀ ಸವಾಲು ಶ್ರೀ ಎಮ್.ಸಿ.ಎಸ್.ಎದುರುದಾರರ ಪರ ವಕೀಲರು**

ನಾನು ದಾವಾ ಸಂಖೆ 183/2010 ರಲ್ಲಿ ಸಿ.ಆರ್.ಎಲ್. ವಕೀಲರನ್ನು ನಮ್ಮ ಪರ ವಾದ ಮಂಡನೆ ಮಾಡಲು ನೇಮಕ ಮಾಡಿದ್ದೇನು. ನನಗೆ ನಿಪಿ-1 ರ ತೀರ್ಪನ್ನು ಪ್ರಶ್ನಿಸಿ ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಆರ್ ಎ ಸಂಖ್ಯೆ 12/2019 ದಾಖಲು ಮಾಡಿರುವ ಬಗ್ಗೆ ಗೊತ್ತಿಲ್ಲ. ಸದರಿ ಮೇಲ್ಮನವಿಯು ವಜಾ ಆಗಿದೆ ಎಂದರೆ ನನಗೆ ಗೊತ್ತಿಲ್ಲ.

**2.** ನಾನು ಎದುರುದಾರರಿಗೆ ಕ್ರಯದ ಕರಾರು ಪತ್ರವನ್ನು ಬರೆದು ಕೊಟ್ಟಿದ್ದೇನೆ ಎಂದರೆ ಸರಿ. ದಿಃ 11-12-2014 ರಂದು ಇದೇ ನ್ಯಾಯಾಲಯದಲ್ಲಿ ವಾದಿಯ ಪರವಾಗಿ ಕ್ರಯಪತ್ರವನ್ನು ಬರೆದು ಕೊಡಬೇಕೆಂದು ತೀರ್ಪು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಜಾರಿ ಅರ್ಜಿ ಸಂಖ್ಯೆ 70/2015 ರಂತೆ ವಾದಿಯು ತೀರ್ಪು ಮತ್ತು ಡಿಕ್ರಿ ಪಾಲನೆಗಾಗಿ ಅರ್ಜಿ ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ.

3. ಸದರಿ ಜಾರಿ ಮತ್ತು ಪಾಲನೆ ಅರ್ಜಿಯಲ್ಲಿಯೂ ಸಹ ನಾವು ವಕೀಲರನ್ನು ನೇಮಕ ಮಾಡಿದ್ದೇವು ಎಂದರೆ ನನಗೆ ಗೊತ್ತಿಲ್ಲ. ನಂತರ ನ್ಯಾಯಾಲಯವು ನಿಯೋಗಿಯನ್ನು ನೇಮಿಸಿ ದಾವಾದ ಡಿಕ್ರಿಯಂತೆ ಕ್ರಯ ಪತ್ರವನ್ನು ನನ್ನ ಪರವಾಗಿ ಬರೆದು ಕೊಟ್ಟು ಜಮೀನಿನ ಸ್ವಾಧೀನವನ್ನು ಬಿಡಿಸಿ ಕೊಟ್ಟಿರುತ್ತದೆ ಎಂದರೆ ಸರಿಯಲ್ಲ.

4. ನನ್ನ ಮಕ್ಕಳ ವಿರುದ್ಧ ಎದುರುದಾರರು ದಾವೆಯನ್ನು ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಮತ್ತು ನನ್ನ ಹೆಣ್ಣುಮಕ್ಕಳು ವಕೀಲರನ್ನು ನೇಮಕ ಮಾಡಿಕೊಂಡಿದ್ದೇವು ಎಂದರೆ ಸರಿ. ಜಾರಿ ಅರ್ಜಿಯಲ್ಲಿಯೂ ಸಹ ನನ್ನ ಹೆಣ್ಣುಮಕ್ಕಳನ್ನು ಪಕ್ಷಗಾರರನ್ನಾಗಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

5. ನಾವು ಸಲ್ಲಿಸಿರುವ ಅಪೀಲಲ್ಲಿಯೂ ಸಹ ಹೆಣ್ಣು ಮಕ್ಕಳು ಬಂದಿದ್ದರು ಎಂದರೆ ಸರಿಯಲ್ಲ. 2014 ರಲ್ಲಿ ಈ ನ್ಯಾಯಾಲಯದ ತೀರ್ಪು ಪ್ರಕಟಗೊಂಡ 9 ವರ್ಷದ ತರುವಾಗ ಈ ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿ. ಸದರಿ ಅರ್ಜಿಯನ್ನು ಸಲ್ಲಿಸಲು ಕಾಲಾವಕಾಶ ಮುಗಿದಿದೆ ಎಂದರೆ ನನಗೆ ಗೊತ್ತಿಲ್ಲ. ತಹಶೀಲದಾರ ಕಚೇರಿಯಲ್ಲಿ ಎದುರುದಾರರ ಹೆಸರಿಗೆ ಖಾತೆಯನ್ನು ಮಾಡದಂತೆ ಅರ್ಜಿಯನ್ನು ನೀಡಿಲ್ಲ.

6. ಎದುರುದಾರರಿಗೆ ಕಾನೂನುಬದ್ಧವಾಗಿ ನ್ಯಾಯಾಲಯದ ತೀರ್ಪಿಗೆ ಅನುಗುಣವಾಗಿ ಬಂದ ಸ್ವತ್ತನ್ನು ಕಬಳಿಸುವ ಸಲುವಾಗಿ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಈಗಾಗಲೇ ನಾವು ಸಲ್ಲಿಸಿರುವ ಅರ್ಜಿಯು ವಜಾಗೊಂಡಿದ್ದರಿಂದ ನಾನು ಈ ಅರ್ಜಿಯನ್ನು ಸಲ್ಲಿಸಲು ಬರುವುದಿಲ್ಲ ಎಂದರೆ ಸರಿಯಲ್ಲ.

7. ನ್ಯಾಯಾಲಯದ ಆದೇಶವನ್ನು ಪಾಲಿಸದೇ ಅದಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ನಾನು 2 ವರ್ಷಗಳಿಂದ ಬರುತ್ತಿದ್ದೇನೆ. ನನಗೆ ಎಲ್ಲಾ ದಾವೆಗಳ ಮತ್ತು ಮೇಲ್ಮನವಿಗಳ ವಿಚಾರಗಳ ಗೊತ್ತಿದ್ದರು ಸಹ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತ ಲೇಖನದ ಮೇರೆಗೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇದೆ ಎಂ

**(ಚಂದನ್.ಎಸ್)**

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಮತ್ತು ಪ್ರದನ್ಯಾದಂ., ಕೆ.ಆರ್.ನಗರ